# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 439 (474) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಐವನ್ ಡಿ.ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 14-08-2025 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರತ್ಯೇಕವಾದ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸುವುದಾಗಿ ಸರ್ಕಾರವು ಆಶ್ವಾಸನೆ ನೀಡಿದ್ದರೂ, ಇನ್ನೂ ಅದನ್ನು ಕಾರ್ಯಗತಗೊಳಿಸದೇ ಇರಲು ಕಾರಣವೇನು; | ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಭಾಗಕ್ಕೆ ಅನ್ವಯವಾಗುವಂತೆ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ಅನ್ನು ದಿನಾಂಕ: 07.11.2024 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿರುತ್ತದೆ.<br><br>ಈ ನೀತಿಯಲ್ಲಿ ವಿಶೇಷವಾಗಿ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕಲ್ಪಿಸಿರುವ ಅವಕಾಶಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಕರಾವಳಿ ಭಾಗದ ಅಭಿವೃದ್ಧಿಗೆ ಪ್ರವಾಸೋದ್ಯಮಕ್ಕೆ ಉತ್ತಮ ಅವಕಾಶವಿದ್ದು, ಅದನ್ನು ಸರಿಯಾಗಿ ರೀತಿಯಲ್ಲಿ ಬಳಸಿಕೊಳ್ಳುತ್ತಿಲ್ಲ ಎಂಬ ದೂರುಗಳಿದ್ದು, ಈ ಬಗ್ಗೆ ಮುಂದಿನ ಯೋಜನೆಗಳಾವುವು; | ಈ ರೀತಿಯ ದೂರುಗಳು ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಇ) | ಕರಾವಳಿ ಭಾಗದ ಬೀಚ್‌ಗಳ ಅಭಿವೃದ್ಧಿಗೆ ಮತ್ತು ಹೋಟೆಲ್ ಉದ್ದಿಮೆಗಳಿಗೆ ಅವಕಾಶ ಇದ್ದರೂ ಇದನ್ನು ಖಾಸಗಿ ಸಹಭಾಗಿತ್ವ ಅಭಿವೃದ್ಧಿ ಪಡಿಸುವ ಅವಕಾಶ ಇದ್ದರೂ ಇನ್ನೂ ಸರಿಯಾಗಿ ಬಳಕೆ ಮಾಡುತ್ತಿಲ್ಲ ಎಂಬ ದೂರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಮುಂದಿರುವ ಯೋಜನೆಗಳಾವುವು? (ವಿವರ ನೀಡುವುದು) | ರಾಜ್ಯದ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಪಂಚತಾರಾ ಹೋಟೆಲ್ ನಿರ್ಮಾಣವು ಒಳಗೊಂಡಂತೆ ವಿವಿಧ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಕರ್ನಾಟಕ ಪ್ರವಾಸೋದ್ಯಮ ನೀತಿ - 2024-29 ರಡಿ ರಿಯಾಯಿತಿ, ಉತ್ತೇಜನ ಹಾಗೂ ಸಹಾಯಧನವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಈ ನೀತಿಯಲ್ಲಿ ವಿಶೇಷವಾಗಿ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕಲ್ಪಿಸಿರುವ ಅವಕಾಶಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ಪ್ರವಾಸೋದ್ಯಮ ಇಲಾಖೆಯು ಖಾಸಗಿ ಸಹಭಾಗಿತ್ವದಲ್ಲಿ ಮಂಗಳೂರು ನಗರ ವ್ಯಾಪ್ತಿಯಲ್ಲಿ ಪಂಚತಾರ ಹೋಟೆಲ್ ಸ್ಥಾಪಿಸಬೇಕೆಂಬ ಬೇಡಿಕೆಗಳು ಇದ್ದರೂ, ಕೈಗಾರಿಕೆ ಸಂಪರ್ಕ ವ್ಯವಸ್ಥೆಗಳು ಇದ್ದರೂ ಪಂಚತಾರ ಹೋಟೆಲ್ ಇಲ್ಲದೇ ಹೂಡಿಕೆದಾರರು ಈ ಬಗ್ಗೆ ತಕರಾರು ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ಪ್ರವಾಸೋದ್ಯಮ ನೀತಿ-2024-29 ರಡಿ ಮಂಗಳೂರು ಒಳಗೊಂಡಂತೆ ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಂಬಂಧ ಹೂಡಿಕೆದಾರರನ್ನು ಒಳಗೊಂಡಂತೆ ಸಭೆಯನ್ನು ದಿನಾಂಕ: 19.02.2025ರಂದು Ocean Pearl ಹೋಟೆಲ್, ಮಂಗಳೂರು ಇಲ್ಲಿ ನಡೆಸಲಾಗಿರುತ್ತದೆ.<br><br>ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ಕರಾವಳಿ ತೀರಗಳಲ್ಲಿ ಗುರುತಿಸಿರುವ 44 ನೋಡ್ಸ್ ಗಳನ್ನು ಹಂತ-ಹಂತವಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು.<br><br>2025-26ನೇ ಸಾಲಿನ ಆಯವ್ಯಯ ಕಂಡಿಕೆ-385ರ ಘೋಷಣೆಯ ಅನುಷ್ಠಾನದ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಣ್ಣೀರುಬಾವಿ ಕಡಲ ತೀರದಲ್ಲಿ ರೆಸಾರ್ಟ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಲು ಸಮಾಲೋಚಕ ಸಂಸ್ಥೆಯನ್ನು ಆಯ್ಕೆ ಮಾಡಲು ಟೆಂಡರ್ ಪ್ರಕಟಿಸಲಾಗಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ 07.08.2025 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಬಿಡ್ಡುದಾರರು ಭಾಗವಹಿಸಿದ್ದು, ಪರಿಶೀಲನಾ ಹಂತದಲ್ಲಿದೆ.<br><br>2025-26ನೇ ಸಾಲಿನ ಆಯವ್ಯಯ ಕಂಡಿಕೆ-385ರ ಘೋಷಣೆಯ ಅನುಷ್ಠಾನ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕೋಡಿಕಲ್, ಗುರುಪುರ ನದಿ ತೀರದಲ್ಲಿ ರೆಸಾರ್ಟ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ವಹಿವಾಟು ಸಲಹೆಗಾರರನ್ನು ಆಯ್ಕೆ ಮಾಡಿಕೊಳ್ಳಲು Infrastructure Development, Ports and Inland Water Transport Department, Government of Karnataka (IDP & IWTD) ರವರೊಂದಿಗೆ ಎಂಪ್ಯಾನಲ್ ಆಗಿರುವ ಸಂಸ್ಥೆಗಳಿಗೆ ಮಾತ್ರ ಟೆಂಡರ್ ಪ್ರಕಟಿಸಿದ್ದು, ಸದರಿ ಟೆಂಡರ್‌ನ Pre-Bid ಸಭೆಯಲ್ಲಿ ಎಂಪ್ಯಾನಲ್ಡ್ ಬಿಡ್ಡುದಾರರಿಗೆ ಪ್ರಕಟಿಸಿರುವ ಟೆಂಡರ್ ಬದಲಿಗೆ ಒಪನ್ ಟೆಂಡರ್ ಅನ್ನು ಪ್ರಕಟಿಸುವಂತೆ ಆಸಕ್ತ ಬಿಡ್ಡುದಾರ ಸಂಸ್ಥೆಯ ಪ್ರತಿನಿಧಿಗಳು ಕೋರಿರುತ್ತಾರೆ. ಆದ್ದರಿಂದ ಸದರಿ ಟೆಂಡರ್ ಅನ್ನು ರದ್ದುಪಡಿಸಿದ್ದು, ಮತ್ತೊಮ್ಮೆ ಟೆಂಡರ್ (Open Tender) ಅನ್ನು ಮರುಪ್ರಕಟಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಉ) | ಕರಾವಳಿಯಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ ಕರಾವಳಿ ಪ್ರಾಧಿಕಾರ ರಚನೆ ಮಾಡಿ ಉತ್ತೇಜನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; (ವಿವರ ನೀಡುವುದು) | ಕರಾವಳಿಯಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕರಾವಳಿ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾವನೆ ಪ್ರಸ್ತುತ ಇಲಾಖೆಯ ಮುಂದೆ ಇರುವುದಿಲ್ಲ.<br><br>ಆದರೆ, ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/16/ ಟಿಡಿಪಿ/2024, ದಿನಾಂಕ: 15.03.2024 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಂಬಂಧ ಶ್ರೀ ಬೀರಣ್ಣ ನಾಯಕ ಮೊಗಟಾ ರವರ ಅಧ್ಯಕ್ಷತೆಯಲ್ಲಿ 07 ಸದಸ್ಯರುಗಳನೊಳಗೊಂಡಂತೆ ಉತ್ತರ ಕನ್ನಡ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಅಧ್ಯಯನ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ. ಅದರಂತೆ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/154/ಟಿಡಿಬಿ/2023, ದಿನಾಂಕ: 21.08.2024 ರಲ್ಲಿ 2023-24ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 297ರಂತೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲ ತೀರದ ಪ್ರವಾಸೋದ್ಯಮ ಅಭಿವೃದ್ಧಿಗೆ ಹಾಗೂ ಕಡಲ ತೀರದ ಸಮಗ್ರ ಅಭಿವೃದ್ಧಿಗಾಗಿ ವಿಸ್ತೃತ ಯೋಜನೆಯನ್ನು ತಯಾರಿಸುವ ಕುರಿತು ಜಿಲ್ಲಾ ಮಟ್ಟದ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ಸಮಿತಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ರಾಜ್ಯಮಟ್ಟದ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ಸಮಿತಿಯನ್ನು ಆಯುಕ್ತರು, ಪ್ರವಾಸೋದ್ಯಮ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಿ, ಸದರಿ ಸಮಿತಿಗಳಿಗೆ ಜವಾಬ್ದಾರಿಗಳನ್ನು ನಿಗಧಿಪಡಿಸಿ ಆದೇಶಿಸಲಾಗಿದೆ. ಅದರಂತೆ ಸಮಿತಿಗಳಿಂದ ವರದಿಯನ್ನು ನಿರೀಕ್ಷಿಸಲಾಗಿದೆ. |
| ಊ) | 02 ವರ್ಷಗಳಲ್ಲಿ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮೀಸಲಿಟ್ಟ ಹಣ ಎಷ್ಟು; ಕೈಗೊಂಡ ಕಾಮಗಾರಿಗಳು ಯಾವುವು? | ಕಳೆದ 02 ವರ್ಷಗಳಿಂದ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

**TOR 170 TDV 2025**

(ಎಚ್.ಕೆ. ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು.

# ಶ್ರೀ ಐವನ್ ಡಿ'ಸೋಜಾ, ಮಾನ್ಯ ವಿಧಾನಪರಿಷತ್ ಸದಸ್ಯರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 439 (474) ಕ್ಕೆ ಅನುಬಂಧ-1

ಕರ್ನಾಟಕ ಪ್ರವಾಸೋದ್ಯಮ ನೀತಿ -2024-29ರಲ್ಲಿ ಕರಾವಳಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ತಿಳಿಸಿರುವ ಅಂಶಗಳ ವಿವರ ಕೆಳಕಂಡಂತಿದೆ:

1. ಕರಾವಳಿ ಪ್ರವಾಸೋದ್ಯಮ ಮತ್ತು ಕಡಲತೀರ ಪ್ರವಾಸೋದ್ಯಮ:

   ಕರಾವಳಿ ಕರ್ನಾಟಕವು 2023ರಲ್ಲಿ 8 ಕೋಟಿಗೂ ಹೆಚ್ಚು ಪ್ರವಾಸಿಗರನ್ನು ಕಂಡಿದೆ. ಕರ್ನಾಟಕದ ಒಟ್ಟು ಪ್ರವಾಸಿಗರ ಸಂಖ್ಯೆಯಲ್ಲಿ ಕರಾವಳಿ ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಸುಮಾರು ಶೇಕಡ 12 ರಿಂದ 15 ರಷ್ಟಿದ್ದು, ಆದರೆ ರಾಜ್ಯದಲ್ಲಿ ಕರಾವಳಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅಪಾರ ಸಾಮರ್ಥ್ಯವಿದೆ.

2. ಕರಾವಳಿ ಕರ್ನಾಟಕದ ಪ್ರವಾಸೋದ್ಯಮಕ್ಕೆ ವಿಶೇಷ ಗಮನ ಹರಿಸುವುದು

   ನೀತಿಯ ಅವಧಿಯಲ್ಲಿ ಕರಾವಳಿ ಪ್ರವಾಸೋದ್ಯಮಕ್ಕೆ ವಿಶೇಷ ಒತ್ತು ನೀಡಲಾಗುವುದು ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾದ ವಿಶ್ವ ದರ್ಜೆಯ ಸೌಲಭ್ಯಗಳೊಂದಿಗೆ ಕರಾವಳಿ ಕರ್ನಾಟಕವನ್ನು ಉತ್ತಮ ಗುಣಮಟ್ಟದ ತಾಣವಾಗಿ ಸುಸ್ಥಿರವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಗಳನ್ನು ಮಾಡಲಾಗುವುದು. ಕರ್ನಾಟಕ ಸರ್ಕಾರವು ರಾಜ್ಯದ ಸಮಗ್ರ 320 ಕಿ. ಮೀ. ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿದೆ.

   ಕರ್ನಾಟಕ ಪ್ರವಾಸೋದ್ಯಮವು ಕರಾವಳಿ ಕರ್ನಾಟಕವನ್ನು ಬಹು-ಉತ್ಪನ್ನ ತಾಣವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತದೆ ಮತ್ತು ವಿರಾಮ, ಮನರಂಜನೆ ಮತ್ತು ಸಾಹಸ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಸೌಲಭ್ಯಗಳ ಅಭಿವೃದ್ಧಿಗೆ ಅನುಕೂಲ ಮಾಡಿಕೊಡುತ್ತದೆ. ಕರಾವಳಿ ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಗೆ ಅಗತ್ಯವಾದ ಒತ್ತು ನೀಡಲು ವಿಶೇಷ ಹಣಕಾಸು ಪ್ಯಾಕೇಜ್ ಅನ್ನು ಸೃಜಿಸಲಾಗುವುದು.

3. ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ:

   ಕರಾವಳಿ ಕರ್ನಾಟಕದ ಕಾರ್ಯಚಟುವಟಿಕೆಗಳನ್ನು ಯೋಜಿಸಲು ಮತ್ತು ಚಾಲನೆಗೊಳಿಸಲು ಅದಕ್ಕಾಗಿಯೇ ಸಮರ್ಪಿತವಾದ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯನ್ನು ರಚಿಸಲಾಗುವುದು. ಕರಾವಳಿ ಅಭಿವೃದ್ಧಿಗಾಗಿ ವಿಶೇಷ ಉಪಕ್ರಮಗಳನ್ನು ಕೈಗೊಳ್ಳಲು ಮತ್ತು ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಹೆಚ್ಚುವರಿ ಪ್ರೋತ್ಸಾಹವನ್ನು ನೀಡಲು ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಗೆ ಅಧಿಕಾರ ನೀಡಲಾಗುತ್ತದೆ. ಮಂಡಳಿಯು ಕರಾವಳಿ ಕರ್ನಾಟಕದಲ್ಲಿ ಯೋಜಿತ ಮತ್ತು ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಮುದಾಯದ ಸಹಭಾಗಿತ್ವದ ಸಮನ್ವಯತೆಯನ್ನು ಖಚಿತಪಡಿಸಿಕೊಳ್ಳಲು ಸಮಗ್ರ ಕರಾವಳಿ ಮಾಸ್ಟರ್ ಪ್ಲ್ಯಾನ್ ಒಂದನ್ನು ಸಿದ್ಧಪಡಿಸಲಾಗುವುದು.

4. ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆ:

   ಪ್ರವಾಸೋದ್ಯಮ ಇಲಾಖೆಯು, ಕರಾವಳಿ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗುವಂತೆ ಸ್ಥಳೀಯ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ವಿನಿಯಮಗಳು ಮತ್ತು ಮಾಸ್ಟರ್ ಪ್ಲ್ಯಾನ್ ಗಳನ್ನು ಪರಿಶೀಲಿಸಿ ತಿದ್ದುಪಡಿ ಮಾಡಲು ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ ಮತ್ತು ಇತರ ಸಂಬಂಧಿತ ಸರ್ಕಾರಿ ಏಜೆನ್ಸಿಗಳು ಮತ್ತು ಹಿತಾಸಕ್ತಿದಾರರೊಂದಿಗೆ ಸಮನ್ವಯ ಸಾಧಿಸಲಾಗುವುದು.

ಪ್ರವಾಸೋದ್ಯಮ ಇಲಾಖೆಯು ಇತರ ಸರ್ಕಾರಿ ಏಜೆನ್ಸಿಗಳೊಂದಿಗೆ ಪ್ರವಾಸೋದ್ಯಮ ಯೋಜನೆಗಳಿಗಾಗಿ ಸಂಚಿತ ನಿಧಿ ಭೂ ಬ್ಯಾಂಕ್ ಗಳನ್ನು ಒಟ್ಟುಗೂಡಿಸಲು ಮತ್ತು ಪಾರದರ್ಶಕ ಕಾರ್ಯವಿಧಾನಗಳ ಮೂಲಕ ಹಂಚಿಕೆಯನ್ನು ಮಾಡಲಾಗುವುದು.

5. ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ

ಕರ್ನಾಟಕ ಪ್ರವಾಸೋದ್ಯಮವು ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಯೋಜನೆಗಳಿಗಾಗಿ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ಕಾರ್ಯವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಗಳು ಮತ್ತು ಹಿತಾಸಕ್ತಿದಾರರೊಂದಿಗೆ ಕಾರ್ಯನಿರ್ವಹಿಸುತ್ತದೆ. ಇದು ಜವಾಬ್ದಾರಿಯುತ ಮೂಲಸೌಕರ್ಯ ಅಭಿವೃದ್ಧಿಯನ್ನು ಉತ್ತೇಜಿಸುವ ನಿಯೋಜಿತ ಉನ್ನತ-ಆದ್ಯತಾ ಪ್ರವಾಸೋದ್ಯಮ ವಲಯಗಳು ಮತ್ತು ಸಮಗ್ರ ಕರಾವಳಿ ಪ್ರವಾಸೋದ್ಯಮ ವಲಯಗಳಿಗೆ ಅಭಿವೃದ್ಧಿ ಹಕ್ಕುಗಳನ್ನು ವರ್ಗಾಯಿಸಲು ಅನುವು ಮಾಡಿಕೊಡಲಾಗುವುದು.

6. ಸಮಗ್ರ ಕರಾವಳಿ ಪ್ರವಾಸೋದ್ಯಮ ವಲಯಗಳು

ಕರಾವಳಿಯ ಉದ್ದಕ್ಕೂ ಸಮಗ್ರ ಕರಾವಳಿ ಪ್ರವಾಸೋದ್ಯಮ ವಲಯಗಳನ್ನು ಸೃಜಿಸಲಿದ್ದು, ಅವು ಪ್ರವಾಸಿಗರಿಗೆ ವಿಶ್ವ ದರ್ಜೆಯ ಅನುಭವವನ್ನು ಒದಗಿಸುವ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ. ಸಮಗ್ರ ವಲಯಗಳು ಉತ್ತಮ-ಯೋಜಿತ ಮೂಲಸೌಕರ್ಯ, ಉತ್ತಮ-ಗುಣಮಟ್ಟದ ಪರಿಸರ ಸ್ನೇಹಿ ವಸತಿ, ಸಾಹಸ, ಸಂಸ್ಕೃತಿ ಮತ್ತು ಮನರಂಜನೆಯ ಕೇಂದ್ರಗಳು ಮತ್ತು ಎಲ್ಲಾ ಆಯವ್ಯಯ ಆದ್ಯತೆಗಳಾದ್ಯಂತ ಪ್ರವಾಸಿಗರಿಗೆ ಪೂರೈಸುವ ಸೌಲಭ್ಯಗಳನ್ನು ಒಳಗೊಂಡಿರುತ್ತವೆ.

7. ಬೃಹತ್ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿ

ಕರ್ನಾಟಕದ ಪ್ರಮುಖ ಕರಾವಳಿ ತಾಣಗಳಾದ್ಯಂತ ಕನಿಷ್ಠ 10 ಬೃಹತ್ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ಪ್ರಯತ್ನಗಳನ್ನು ಮಾಡಲಾಗುತ್ತದೆ. ಈ ಯೋಜನೆಗಳು ಆತಿಥ್ಯ, ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಸಂಯೋಜಿಸಿ, ಕರ್ನಾಟಕದ ಕರಾವಳಿಯನ್ನು ಜಾಗತಿಕ ಸ್ಪರ್ಧಾತ್ಮಕ ಪ್ರವಾಸೋದ್ಯಮ ತಾಣವಾಗಿಸುತ್ತವೆ.

ಮೆಗಾ ಪ್ರವಾಸೋದ್ಯಮ ಯೋಜನೆಗಳು ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಸಬಲೀಕರಣ ಸಮಿತಿಯು ಅನುಮೋದಿಸಿದಂಥ ಗ್ರಾಹಕರಿಗೆ ತಕ್ಕ ಬೆಂಬಲ ಮತ್ತು ಪ್ರಯೋಜನಗಳಿಗೆ ಅರ್ಹವಾಗಿರುತ್ತವೆ. ಈ ಯೋಜನೆಗಳನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಖಾಸಗಿ ವಲಯದೊಂದಿಗಿನ ಕಾರ್ಯತಂತ್ರದ ಸಹಯೋಗ ಮತ್ತು ವ್ಯವಸ್ಥಿತ ಅನುಮೋದನೆ ಪ್ರಕ್ರಿಯೆಗಳಿಗೆ ಆದ್ಯತೆ ನೀಡಲಾಗುವುದು.

8. ಪ್ರವಾಸಿ ಋತುಗಳ ಅವಧಿಯ ಸೌಲಭ್ಯಗಳು

ಪ್ರವಾಸೋದ್ಯಮ ಇಲಾಖೆಯು ಕರಾವಳಿ ಕರ್ನಾಟಕದಲ್ಲಿ ಪ್ರವಾಸಿ ಋತುಗಳ ಅವಧಿಗಳಲ್ಲಿ ಅನುಕೂಲತೆಗಳನ್ನು ಕಲ್ಪಿಸಲು ಮತ್ತು ಉದ್ಯೋಗವನ್ನು ಸೃಷ್ಟಿಸಲು, ವಸತಿಗೃಹಗಳು ಮತ್ತು ಕಿಯೋಸ್ಕಗಳಂತಹ ತಾತ್ಕಾಲಿಕ ಸೌಲಭ್ಯಗಳ ನಿರ್ಮಾಣಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಹೊರಡಿಸುತ್ತದೆ. ಈ ಸೌಲಭ್ಯಗಳು ಪ್ರವಾಸಿಗರಿಗೆ ಅಗತ್ಯ ಸೇವೆಗಳನ್ನು ಒದಗಿಸುತ್ತವೆ ಹಾಗೂ ಸುಸ್ಥಿರತೆ ಮತ್ತು ಸಿಆರ್‌ಝಡ್ ಮಾನದಂಡಗಳಿಗೆ ಬದ್ಧವಾಗಿ ಹೆಚ್ಚುವರಿ ಋತುಕಾಲೀನ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ. ಅಧಿಕೃತ ಸ್ಥಳೀಯ ಅನುಭವಗಳನ್ನು ಒದಗಿಸುವುದಕ್ಕೆ ಸುಸ್ಥಿರ ವಸ್ತುಗಳು ಮತ್ತು ನವೀಕರಿಸಬಹುದಾದ ಶಕ್ತಿಯನ್ನು ಬಳಸುವುದಕ್ಕೆ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳನ್ನು ಅಳವಡಿಸುವುದಕ್ಕೆ ಒತ್ತು ನೀಡಲಾಗುತ್ತದೆ.

.............3

9. ಕರಾವಳಿ ಉತ್ಸವಗಳ ಮೂಲಕ ಉತ್ತೇಜನ

ಕರಾವಳಿ ಕರ್ನಾಟಕವನ್ನು ಉತ್ತೇಜಿಸಲು, ಕಡಲತೀರದ ಕಾರ್ಯಕ್ರಮಗಳು, ವೇದಿಕೆ ಪ್ರದರ್ಶನಗಳು, ಮಾರುಕಟ್ಟೆಗಳು ಮತ್ತು ಸಾಹಸೋದ್ಯಮ ಚಟುವಟಿಕೆಗಳನ್ನು ಪ್ರದರ್ಶಿಸುವ ಮೂಲಕ ಪ್ರವಾಸಿ ತಾಣಗಳು ಮತ್ತು ಅವುಗಳ ಸ್ಥಳೀಯ ಸಂಸ್ಕೃತಿ ಮತ್ತು ಪಾಕಪದ್ಧತಿಗಳನ್ನು ಪ್ರದರ್ಶಿಸಲು ವಾರ್ಷಿಕ ಉತ್ಸವಗಳನ್ನು ಆಯೋಜಿಸಲಾಗುತ್ತದೆ. ಈ ಉತ್ಸವಗಳನ್ನು ವಿರಾಮ ಮತ್ತು ಸಾಂಸ್ಕೃತಿಕ ಅನುಭವಗಳಿಗೆ ಸಂಬಂಧಿಸಿದಂತೆ ಕರ್ನಾಟಕವನ್ನು ಆಕರ್ಷಕ ತಾಣವನ್ನಾಗಿ ಮಾಡಲು ಜಾಗತಿಕ ವೇದಿಕೆಗಳಲ್ಲಿ ಉತ್ಪನ್ನಗಳ ಪ್ರಚಾರವನ್ನು ಏರ್ಪಡಿಸಲಾಗುವುದು ಮತ್ತು ಇದು ರಾಜ್ಯಕ್ಕೆ ಬರುವ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆಯಾಗುತ್ತದೆ.

10. ಬ್ಲ್ಯೂ ಫ್ಲ್ಯಾಗ್ ಪ್ರಮಾಣ ಪತ್ರವನ್ನು ಪಡೆಯುವುದು

ಕರ್ನಾಟಕ ಪ್ರವಾಸೋದ್ಯಮವು, ಕರಾವಳಿ ಪ್ರದೇಶಗಳಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ತನ್ನ ಬದ್ಧತೆಯನ್ನು ಪ್ರದರ್ಶಿಸುವ ನಿಟ್ಟಿನಲ್ಲಿ ರಾಜ್ಯದ ಹೆಚ್ಚಿನ ಕಡಲತೀರಗಳಿಗೆ ಬ್ಲ್ಯೂ ಫ್ಲ್ಯಾಗ್ ಪ್ರಮಾಣ ಪತ್ರವನ್ನು ಪಡೆಯುವ ಗುರಿಯನ್ನು ಹೊಂದಿದೆ ಮತ್ತು ಪ್ರಮಾಣ ಪತ್ರವನ್ನು ಪಡೆಯಲು ಮತ್ತು ನಿರ್ವಹಿಸಲು ಸಂಬಂಧಿತ ಸರ್ಕಾರಿ ಏಜೆನ್ಸಿಗಳಿಗೆ ಅಗತ್ಯ ಬೆಂಬಲ ನೀಡಲಾಗುವುದು.

11. ಕರಾವಳಿ ಕರ್ನಾಟಕದ ಯೋಜಿತ ಅಭಿವೃದ್ಧಿ ಮತ್ತು ಸಿಆರ್‌ಝಡ್ ಮಾನದಂಡಗಳೊಂದಿಗೆ ಹೊಂದಾಣಿಕೆ:

ಪ್ರವಾಸೋದ್ಯಮ ಇಲಾಖೆಯು, ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) 2019ರ ಅಧಿಸೂಚನೆಯ ಅಡಿಯಲ್ಲಿ ಕರ್ನಾಟಕ ಕರಾವಳಿ ವಲಯ ನಿರ್ವಹಣಾ ಯೋಜನೆಯಲ್ಲಿ (ಸಿಝಡ್‌ಎಂಪಿ) ಅಳವಡಿಸಿಕೊಳ್ಳಲಾದ ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ಸಮಗ್ರ ಪ್ರವಾಸೋದ್ಯಮ ಯೋಜನೆಯನ್ನು ಸಿದ್ಧಪಡಿಸಿದೆ. ಕರ್ನಾಟಕ ಸಿಝಡ್‌ಎಂಪಿಯಲ್ಲಿ ಪ್ರವಾಸೋದ್ಯಮ ಯೋಜನೆಯ ಅಳವಡಿಕೆಯು ಅನುಕೂಲಕರ ಕಾರ್ಯವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸಿಆರ್‌ಝಡ್ 2019ರ ಅಧಿಸೂಚನೆಯ ಅಡಿಯಲ್ಲಿ ಅನುಮತಿಸಬಹುದಾದ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳ ಅಭಿವೃದ್ಧಿಗೆ ಅನುಕೂಲ ಕಲ್ಪಿಸಿದೆ. ಕರ್ನಾಟಕ ಸರ್ಕಾರವು ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಯೋಜನೆಗಳು ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಅನುಕೂಲಕರ ಕ್ರಮಗಳನ್ನು ಕೈಗೊಳ್ಳುವುದನ್ನು ಮುಂದುವರೆಸುತ್ತದೆ.

ಕರ್ನಾಟಕದ ಕರಾವಳಿ ಪಟ್ಟಣಗಳು ಮತ್ತು ಕಡಲತೀರಗಳಾದ್ಯಂತ ಪ್ರವಾಸೋದ್ಯಮ ಕೊಡುಗೆಗಳನ್ನು ಸಂಪರ್ಕಿಸುವಂಥ ಕರಾವಳಿ ವಲಯಗಳನ್ನು ಅಭಿವೃದ್ಧಿಪಡಿಸುತ್ತದೆ. ಪ್ರವಾಸೋದ್ಯಮ ಯೋಜನೆಗಳನ್ನು ಎಲ್ಲೆಲ್ಲಿ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ಮಾರ್ಗದರ್ಶನವಾಗಿ ಕಾರ್ಯನಿರ್ವಹಿಸಲು ಯೋಜಿತ ರೀತಿಯಲ್ಲಿ ಸಂಪರ್ಕ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುವುದು.

12. ಅಭಿವೃದ್ಧಿ ಸಹಯೋಗ

ಕರ್ನಾಟಕದಲ್ಲಿ, ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ಪ್ರವಾಸೋದ್ಯಮ ಯೋಜನೆ, ಕರ್ನಾಟಕ ಕಡಲ ದೃಶ್ಯ ಯೋಜನೆ ಮತ್ತು ಸರ್ಕಾರವು ಕೈಗೊಂಡ ಇಂತಹ ಇತರ ಯೋಜನೆ ಮತ್ತು ಅಭಿವೃದ್ಧಿ ಉಪಕ್ರಮಗಳಿಗೆ ಅನುಗುಣವಾಗಿ ಕರಾವಳಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತದೆ. ಜೊತೆಗೆ ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸ್ವದೇಶ್ ದರ್ಶನ ಮತ್ತು ಸಾಗರಮಾಲಾದಂಥ ಕೇಂದ್ರ ಸರ್ಕಾರದ ಯೋಜನೆಗಳ ನೆರವನ್ನು ಸಹ ಕೋರಲಾಗುವುದು.

13. ಹೂಡಿಕೆ ಸೌಲಭ್ಯ

ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಯೋಜನೆಗಳಿಗೆ ಬಂಡವಾಳ ಹೂಡಿಕೆಗೆ ಅನುಕೂಲವಾಗುವಂತೆ ಮತ್ತು ಅನುಕೂಲಕರ ಬೆಂಬಲವನ್ನು ಕಲ್ಪಿಸಲು ಸಮರ್ಪಕ ಸಾಂಸ್ಥಿಕ ಕಾರ್ಯವ್ಯವಸ್ಥೆಯೊಂದನ್ನು ಸ್ಥಾಪಿಸಲಾಗುವುದು. ಇದು ಸಿಆರ್‌ಝಡ್ ಅನುಮತಿ ಮತ್ತು ಇತರ ಶಾಸನಾತ್ಮಕ ಅನುಮೋದನೆಗಳಿಗಾಗಿ ಅನುಕೂಲ ಕಲ್ಪಿಸುವುದನ್ನೂ ಸಹ ಒಳಗೊಂಡಿರುತ್ತದೆ. ಕರಾವಳಿ ಸಮುದಾಯಗಳಿಂದ ಬರುವ ಪ್ರಸ್ತಾವಗಳಿಗೂ ಸಹ ಆದ್ಯತೆ ನೀಡಲಾಗುತ್ತದೆ.

14. ಪ್ರವಾಸೋದ್ಯಮ ಪರಿಕಲ್ಪನೆಗಳನ್ನು ಒಗ್ಗೂಡಿಸುವುದು

ಕರಾವಳಿ ಕರ್ನಾಟಕದ ಅಭಿವೃದ್ಧಿಯು ಸಾಹಸ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮ, ಶಿಕ್ಷಣ ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮ, ಪಾಕಪದ್ಧತಿ ಪ್ರವಾಸೋದ್ಯಮ, ಒಳನಾಡಿನ ಜಲ ಪ್ರವಾಸೋದ್ಯಮ, ಕಡಲ ಪ್ರವಾಸೋದ್ಯಮ ಮತ್ತು ಸ್ವಾಸ್ಥ್ಯ ಪ್ರವಾಸೋದ್ಯಮ ಸೇರಿದಂತೆ ಅನೇಕ ವಿಷಯಗಳ ಸಹಯೋಗವನ್ನು ಪಡೆಯಲಾಗುವುದು.

*****

**ಶ್ರೀ ಐವನ್ ಡಿ'ಸೋಜಾ, ಮಾನ್ಯ ವಿಧಾನಪರಿಷತ್ ಸದಸ್ಯರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 439 (474) ಕ್ಕೆ ಅನುಬಂಧ -2.**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರೆಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| 1 | 2 | 3 | 4 | 5 | 6 | | 7 | 10 |
| | **ದಕ್ಷಿಣ ಕನ್ನಡ ಜಿಲ್ಲೆ** | | | | | | | |
| | **ಮಂಗಳೂರು ತಾಲ್ಲೂಕು** | | | | | | | |
| 1 | ಮಂಗಳೂರು ತಾಲ್ಲೂಕಿನ ಉಳ್ಳಾಲ ಗ್ರಾಮದ ಚೀರುಂಭ ಭಗವತಿ ದೇವಸ್ಥಾನದ ಬಳಿ ಯಾತ್ರಿನಿವಾಸ ಕಾಮಗಾರಿ | 2017-18 ಬಂಡವಾಳ ವೆಚ್ಚಗಳು | 50.00 | ಕೆಆರ್ ಐಡಿಎಲ್ | 35.00 | 15.00 | 0.00 | ಮುಕ್ತಾಯದ ಹಂತದಲ್ಲಿದೆ |
| 2 | ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಂಗಳೂರಿನ ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯ ಶೌಚಾಲಯ ಕಾಮಗಾರಿ | 2019-20 ಬಂಡವಾಳ ವೆಚ್ಚಗಳು | 50.00 | ನಿರ್ಮಿತಿ ಕೇಂದ್ರ | 17.00 | 33.00 | 0.00 | ಪೂರ್ಣ ಗೊಂಡಿದೆ |
| 3 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಉಳ್ಳಾಲದ ಸಯ್ಯದ ಮದನಿ ದರ್ಗಾದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 2017-18 ಬಂಡವಾಳ ವೆಚ್ಚಗಳು | 75.00 | ಕೆಆರ್ ಐಡಿಎಲ್ | 70.00 | 5.00 | 0.00 | ಪೂರ್ಣ ಗೊಳ್ಳುವ ಹಂತದಲ್ಲಿದೆ |
| 4 | ಮಂಗಳೂರು ತಾಲ್ಲೂಕಿನ ಮಂಜನಾಡಿ ದರ್ಗಾದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 2017-18 ಬಂಡವಾಳ ವೆಚ್ಚಗಳು | 50.00 | ಕೆಆರ್ ಐಡಿಎಲ್ | 20.00 | 30.00 | 0.00 | ಆರ್.ಸಿ.ಸಿ ಕಾಮಗಾರಿ ಪ್ರಗತಿಯಲ್ಲಿದೆ |
| 5 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ತಣ್ಣೀರುಬಾವಿ ಕಡಲ ತೀರಕ್ಕೆ ಸಂಪರ್ಕ ರಸ್ತೆ, ದುರಸ್ತಿ, ಅಗಲೀಕರಣ ಹಾಗೂ ಇತರೆ ಕಾಮಗಾರಿಯ ಕುರಿತು | 2019-20 ಬಂಡವಾಳ ವೆಚ್ಚಗಳು | 100.00 | ಕೆಆರ್ ಐಡಿಎಲ್ | 73.00 | 27.00 | 0.00 | ಪೂರ್ಣ ಗೊಂಡಿದೆ |
| | **ಬೆಳ್ತಂಗಡಿ ತಾಲ್ಲೂಕು** | | | | | | | |
| 6 | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್ ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 2019-20 ಬಂಡವಾಳ ವೆಚ್ಚಗಳು | 150.00 | ಕೆಆರ್ ಐಡಿಎಲ್ | 100.00 | 40.00 | 10.00 | ಪೂರ್ಣ ಗೊಂಡಿದೆ |
| 7 | ಬೆಳ್ತಂಗಡಿ ತಾಲ್ಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿ | 2019-20 ಪ್ರಧಾನ ಕಾಮಗಾರಿಗಳು | 464.52 | ಲೋಕೋಪಯೋಗಿ ಇಲಾಖೆ | 362.00 | 100.00 | 2.52 | ಪೂರ್ಣ ಗೊಂಡಿದೆ |
| | **ಮೂಡಬಿದರೆ ತಾಲ್ಲೂಕು** | | | | | | | |
| 8 | ಜೈನ ಕಾಶಿ ಮೂಡಬಿದರೆಯಲ್ಲಿರುವ ಯಾತ್ರಿನಿವಾಸಕ್ಕೆ 15 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 2016-17 ಬಂಡವಾಳ ವೆಚ್ಚಗಳು | 70.00 | ಕೆಆರ್ ಐಡಿಎಲ್ | 52.50 | 17.50 | 0.00 | ಪೂರ್ಣ ಗೊಂಡಿದೆ |
| | **ಉಡುಪಿ ಜಿಲ್ಲೆ** | | | | | | | |
| | **ಉಡುಪಿ ತಾಲ್ಲೂಕು** | | | | | | | |
| 9 | ಉಡುಪಿ ಜಿಲ್ಲೆ/ತಾಲ್ಲೂಕು ಕೋಟ ಡಾ. ಶಿವರಾಮಕಾರಂತ ಥೀಂ ಪಾರ್ಕ್‌ನ ಸಮಗ್ರ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 100.00 | ಕೆಆರ್ ಐಡಿಎಲ್ | 65.00 | 35.00 | 0.00 | ಪೂರ್ಣ ಗೊಂಡಿದೆ |
| | **ಕಾಪು ತಾಲ್ಲೂಕು** | | | | | | | |
| 10 | ಉಡುಪಿ ಜಿಲ್ಲೆಯ ಕಾಪು ವಿಧಾನಸಭಾಕ್ಷೇತ್ರದ ಪಡುಬಿದ್ರಿ ನಡಿಘಟ್ಟ ಬೀಚ್ ರಸ್ತೆಯ ಎಂಡ್ ಪಾಯಿಂಟ್ ನಲ್ಲಿ ಸಂಪರ್ಕ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ ಕಾಮಗಾರಿ | 2019-20 ಬಂಡವಾಳ ವೆಚ್ಚಗಳು | 75.00 | ಲೋಕೋಪ ಯೋಗಿ ಇಲಾಖೆ | 25.00 | 25.00 | 25.00 | ಪೂರ್ಣ ಗೊಂಡಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರೆಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| | **ಕಾರ್ಕಳ ತಾಲ್ಲೂಕು** | | | | | | | |
| 11 | ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಪುರಾತನ ಐತಿಹಾಸಿಕ ಆನೆಕೆರೆ ಹಾಗೂ ಬಸದಿಯನ್ನು ಅಭಿವೃದ್ಧಿಪಡಿಸುವುದು | 2019-20 ಪ್ರಧಾನ ಕಾಮಗಾರಿಗಳು | 200.00 | ಕೆ.ಆರ್. ಐ.ಡಿ.ಎಲ್ | 67.00 | 50.00 | 83.00 | ಅಂತಿಮ ಹಂತ ದಲ್ಲಿದೆ. |
| | **ಕುಂದಾಪುರ ತಾಲ್ಲೂಕು** | | | | | | | |
| 12 | ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲ ತೀರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವುದು. | 2021-22 ಪ್ರಧಾನ ಕಾಮಗಾರಿಗಳು | 995.50 | ಕೆ.ಟಿ.ಐ.ಎಲ್. ಬೆಂಗಳೂರು | 250.00 | 200.00 | 545.50 | ಪ್ರಗತಿ ಯಲ್ಲಿದೆ |
| | **ಬೈಂದೂರು ತಾಲ್ಲೂಕು** | | | | | | | |
| 13 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ | 2021-22 ಪ್ರಧಾನ ಕಾಮಗಾರಿಗಳು | 1138.84 | ಕೆ.ಟಿ.ಐ.ಎಲ್. | 526.99 | 300.00 | 311.85 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 14 | ಉಡುಪಿ ಜಿಲ್ಲೆ, ಬೈಂದೂರು ತಾಲ್ಲೂಕಿನ ಪಡುವರಿ ಸೋಮೇಶ್ವರದ ಶ್ರೀ ಸೋಮನಾಥೇಶ್ವರ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿ | 2023-24 ಪ್ರಧಾನ ಕಾಮಗಾರಿಗಳು | 124.00 | ಕೆ.ಟಿ. ಐ.ಎಲ್. | 0.00 | 41.00 | 83.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ |
| | **ಪುತ್ತೂರು ತಾಲ್ಲೂಕು** | | | | | | | |
| 15 | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪ್ರವಾಸೋದ್ಯಮ ಕೇಂದ್ರವಾದ ಬಿರುಮಲೆ ಬೆಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿಯ ಕುರಿತು | 2024-25 ಬಂಡವಾಳ ವೆಚ್ಚಗಳು | 200.00 | ಜಿಲ್ಲಾಧಿಕಾರಿಗಳು | 0.00 | 100.00 | 100.00 | ಪ್ರಗತಿ ಯಲ್ಲಿದೆ |
| | **ಉತ್ತರ ಕನ್ನಡ ಜಿಲ್ಲೆ** | | | | | | | |
| | **ಹೊನ್ನಾವರ ತಾಲ್ಲೂಕು** | | | | | | | |
| 16 | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಇಡಗುಂಜಿ ಗ್ರಾಮ ಪಂಚಾಯತ್ ಶ್ರೀ ಕ್ಷೇತ್ರಪಾಲೇಶ್ವರ ದೇವಸ್ಥಾನ ಮಾಳ್ಕೋಡು ಸಮೀಪ ಯಾತ್ರಿನಿವಾಸ ನಿರ್ಮಾಣ | 2017-18 ಬಂಡವಾಳ ವೆಚ್ಚಗಳು | 25.00 | ಕೆಆರ್‌ಐಡಿಎಲ್ | 10.00 | 13.75 | 1.25 | ಪೂರ್ಣಗೊಂಡಿದೆ |
| | **ಶಿರಸಿ ತಾಲ್ಲೂಕು** | | | | | | | |
| 17 | ಶಿರಸಿ ನಗರದ ದೇವಿಕೆರೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ. | 2015-16 ಬಂಡವಾಳ ವೆಚ್ಚಗಳು | 250.00 | ಕೆಆರ್‌ಐಡಿಎಲ್ | 225.00 | 25.00 | 0.00 | ಪೂರ್ಣಗೊಂಡಿದೆ |
| 18 | ಶಿರಸಿ ತಾಲ್ಲೂಕಿನ ಸೋಂದಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಶ್ರೀ ಕ್ಷೇತ್ರ ಸ್ವಾತಿ ದಿಗಂಬರ ಜೈನ ಮಠ ಇಲ್ಲಿ ಯಾತ್ರಿನಿವಾಸ ನಿರ್ಮಾಣ | 2019-20 ಬಂಡವಾಳ ವೆಚ್ಚಗಳು | 164.25 | ನಿರ್ಮಿತಿ ಕೇಂದ್ರ | 100.00 | 20.00 | 44.25 | ಪ್ರಗತಿ ಯಲ್ಲಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರೆಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| | **ಕುಮಟಾ ತಾಲ್ಲೂಕು** | | | | | | | |
| 19 | ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕಿನ ಯಾಣ ಶ್ರೀ ಭೈರವೇಶ್ವರ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಹಾಗೂ ಪಕ್ಕ ಚರಂಡಿ ಮತ್ತು ಇನ್ನಿತರೆ ಅಗತ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ | 2023-24 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 0.00 | 100.00 | 0.00 | ಮಳೆಗಾಲ ಮುಗಿದ ನಂತರ ಪ್ರಾರಂಭಿಸಲಾಗುವುದು. |
| | **ಯಲ್ಲಾಪುರ ತಾಲ್ಲೂಕು** | | | | | | | |
| 20 | ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ದೇಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಿಗೆ ಗ್ರಾಮದ ಶಿವಪುರ ತೂಗುಸೇತುವೆ ಹಾಗೂ ಕಾಳಿ ನದಿ ಹಿನ್ನೀರಿನ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಿ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ | 2023-24 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 0.00 | 100.00 | 0.00 | ಮಳೆಗಾಲ ಮುಗಿದ ನಂತರ ಪ್ರಾರಂಭಿಸಲಾಗುವುದು. |
| | **ದಾಂಡೇಲಿ ತಾಲ್ಲೂಕು** | | | | | | | |
| 21 | ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ಮೊಸಳೆ ಉದ್ಯಾನವನ ಅಭಿವೃದ್ಧಿ (ಲ್ಯಾಂಡ್ ಸ್ಕೇಪಿಂಗ್, ಪಾರ್ಕಿಂಗ್, ಪಾತ್ ವೇ, ಚೈನ್ ಲಿಂಕ್ ಫೆನ್ಸಿಂಗ್, ವಿವ್ಹಿಂಗ್ ಡೆಕ್, ಸ್ವಾಗತ ಕಮಾನು, ಕಾಫೀ ಶಾಪ್, ಶೌಚಾಲಯ, ಪರಗೋಲ, ಸಾಲಿಡ್ ವೇಸ್ಟ್ ನಿರ್ವಹಣಾ ಘಟಕ, ಸೂಚನಾ ಫಲಕಗಳು, ಲೈಟಿಂಗ್ ಸೌಲಭ್ಯ, ಇತ್ಯಾದಿ) | 2019-20 ಪ್ರಧಾನ ಕಾಮಗಾರಿಗಳು | 372.60 | ಲೋಕೋಪಯೋಗಿ ಇಲಾಖೆ | 325.00 | 47.60 | 0.00 | ಪೂರ್ಣಗೊಂಡಿದೆ |
| | **ಒಟ್ಟು ಮೊತ್ತ** | | **4854.71** | | **2323.49** | **1324.85** | **1206.37** | |

Gmail KGS TourismDept <kgstourismdept@gmail.com>

# Reply for the LAQ No.439 (474) Revised

1 message

**Department of Tourism Government of Karnataka** <karnatakatourismktvg1@gmail.com> 13 August 2025 at 13:52
To: acs-tour@karnataka.gov.in, secytourkar@gmail.com, KGS TourismDept <kgstourismdept@gmail.com>

ಮಾನ್ಯರೇ,

ಈ ಇ- ಮೇಲ್ ಸಂದೇಶದೊಂದಿಗೆ ಲಗತ್ತಿಸಿರುವ ಉತ್ತರವನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

Regards,
Department of Tourism
Government of Karnataka
4th Floor, Embassy Icon,
Infantry Road, Bangalore-560001
Phone : 080-22352424, 22352525, 22352727

---

**Annexure-3 for the LAQ No.439 (474) (Sri. Ivan D'Souza).xlsx**
22K

## ಶ್ರೀ ಐವನ್ ಡಿ'ಸೋಜಾ, ಮಾನ್ಯ ವಿಧಾನಪರಿಷತ್ ಸದಸ್ಯರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 439 (474) ಕ್ಕೆ ಅನುಬಂಧ-3

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರೆಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | | 10 |
| | ದಕ್ಷಿಣ ಕನ್ನಡ ಜಿಲ್ಲೆ | | | | | | | |
| | ಮಂಗಳೂರು ತಾಲ್ಲೂಕು | | | | | | | |
| 1 | ಮಂಗಳೂರು ತಾಲ್ಲೂಕಿನ ಉಳ್ಳಾಲ ಗ್ರಾಮದ ಚೀರುಂಭ ಭಗವತಿ ದೇವಸ್ಥಾನದ ಬಳಿ ಯಾತ್ರಿನಿವಾಸ ಕಾಮಗಾರಿ | 2017-18 ಬಂಡವಾಳ ವೆಚ್ಚಗಳು | 50.00 | ಕೆಆರ್ ಐಡಿಎಲ್ | 35.00 | 15.00 | 0.00 | ಮುಕ್ತಾಯದ ಹಂತದಲ್ಲಿದೆ |
| 2 | ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಂಗಳೂರಿನ ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯ ಶೌಚಾಲಯ ಕಾಮಗಾರಿ | 2019-20 ಬಂಡವಾಳ ವೆಚ್ಚಗಳು | 50.00 | ನಿರ್ಮಿತಿ ಕೇಂದ್ರ | 17.00 | 33.00 | 0.00 | ಪೂರ್ಣ ಗೊಂಡಿದೆ |
| 3 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಉಳ್ಳಾಲದ ಸಯ್ಯದ ಮದನಿ ದರ್ಗಾದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 2017-18 ಬಂಡವಾಳ ವೆಚ್ಚಗಳು | 75.00 | ಕೆಆರ್ ಐಡಿಎಲ್ | 70.00 | 5.00 | 0.00 | ಪೂರ್ಣ ಗೊಳ್ಳುವ ಹಂತದಲ್ಲಿದೆ |
| 4 | ಮಂಗಳೂರು ತಾಲ್ಲೂಕಿನ ಮಂಜನಾಡಿ ದರ್ಗಾದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 2017-18 ಬಂಡವಾಳ ವೆಚ್ಚಗಳು | 50.00 | ಕೆಆರ್ ಐಡಿಎಲ್ | 20.00 | 30.00 | 0.00 | ಆರ್.ಸಿ.ಸಿ ಕಾಮಗಾರಿ ಪ್ರಗತಿಯಲ್ಲಿದೆ |
| 5 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ತಣ್ಣೀರುಬಾವಿ ಕಡಲ ತೀರಕ್ಕೆ ಸಂಪರ್ಕ ರಸ್ತೆ, ದುರಸ್ತಿ, ಅಗಲೀಕರಣ ಹಾಗೂ ಇತರೆ ಕಾಮಗಾರಿಯ ಕುರಿತು | 2019-20 ಬಂಡವಾಳ ವೆಚ್ಚಗಳು | 100.00 | ಕೆಆರ್ ಐಡಿಎಲ್ | 73.00 | 27.00 | 0.00 | ಪೂರ್ಣ ಗೊಂಡಿದೆ |
| | ಬೆಳ್ತಂಗಡಿ ತಾಲ್ಲೂಕು | | | | | | | |
| 6 | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್ ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 2019-20 ಬಂಡವಾಳ ವೆಚ್ಚಗಳು | 150.00 | ಕೆಆರ್ ಐಡಿಎಲ್ | 100.00 | 40.00 | 10.00 | ಪೂರ್ಣ ಗೊಂಡಿದೆ |
| 7 | ಬೆಳ್ತಂಗಡಿ ತಾಲ್ಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿ | 2019-20 ಪ್ರಧಾನ ಕಾಮಗಾರಿಗಳು | 464.52 | ಲೋಕೋಪ ಯೋಗಿ ಇಲಾಖೆ | 362.00 | 100.00 | 2.52 | ಪೂರ್ಣ ಗೊಂಡಿದೆ |
| | ಮೂಡಬಿದರೆ ತಾಲ್ಲೂಕು | | | | | | | |
| 8 | ಜೈನ ಕಾಶಿ ಮೂಡಬಿದರೆಯಲ್ಲಿರುವ ಯಾತ್ರಿನಿವಾಸಕ್ಕೆ 15 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 2016-17 ಬಂಡವಾಳ ವೆಚ್ಚಗಳು | 70.00 | ಕೆಆರ್ ಐಡಿಎಲ್ | 52.50 | 17.50 | 0.00 | ಪೂರ್ಣ ಗೊಂಡಿದೆ |
| | ಉಡುಪಿ ಜಿಲ್ಲೆ | | | | | | | |
| | ಉಡುಪಿ ತಾಲ್ಲೂಕು | | | | | | | |
| 9 | ಉಡುಪಿ ಜಿಲ್ಲೆ/ತಾಲ್ಲೂಕು ಕೋಟ ಡಾ. ಶಿವರಾಮಕಾರಂತ ಥೀಂ ಪಾರ್ಕ್‌ನ ಸಮಗ್ರ ಅಭಿವೃದ್ಧಿ ಕಾಮಗಾರಿ. | 2019-20 ಬಂಡವಾಳ ವೆಚ್ಚಗಳು | 100.00 | ಕೆಆರ್ ಐಡಿಎಲ್ | 65.00 | 35.00 | 0.00 | ಪೂರ್ಣ ಗೊಂಡಿದೆ |
| | ಕಾಪು ತಾಲ್ಲೂಕು | | | | | | | |
| 10 | ಉಡುಪಿ ಜಿಲ್ಲೆಯ ಕಾಪು ವಿಧಾನಸಭಾಕ್ಷೇತ್ರದ ಪಡುಬಿದ್ರಿ ನಡಿಘಟ್ಟ ಬೀಚ್ ರಸ್ತೆಯ ಎಂಡ್ ಪಾಯಿಂಟ್ ನಲ್ಲಿ ಸಂಪರ್ಕ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ ಕಾಮಗಾರಿ | 2019-20 ಬಂಡವಾಳ ವೆಚ್ಚಗಳು | 75.00 | ಲೋಕೋಪ ಯೋಗಿ ಇಲಾಖೆ | 25.00 | 25.00 | 25.00 | ಪೂರ್ಣ ಗೊಂಡಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರೆಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| | **ಕಾರ್ಕಳ ತಾಲ್ಲೂಕು** | | | | | | | |
| 11 | ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಪುರಾತನ ಐತಿಹಾಸಿಕ ಆನೆಕೆರೆ ಹಾಗೂ ಬಸದಿಯನ್ನು ಅಭಿವೃದ್ಧಿಪಡಿಸುವುದು | 2019-20 ಪ್ರಧಾನ ಕಾಮಗಾರಿಗಳು | 200.00 | ಕೆ.ಆರ್. ಐ.ಡಿ.ಎಲ್ | 67.00 | 50.00 | 83.00 | ಅಂತಿಮ ಹಂತ ದಲ್ಲಿದೆ. |
| | **ಕುಂದಾಪುರ ತಾಲ್ಲೂಕು** | | | | | | | |
| 12 | ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲ ತೀರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವುದು. | 2021-22 ಪ್ರಧಾನ ಕಾಮಗಾರಿಗಳು | 995.50 | ಕೆ.ಟಿ.ಐ.ಎಲ್. ಬೆಂಗಳೂರು | 250.00 | 200.00 | 545.50 | ಪ್ರಗತಿ ಯಲ್ಲಿದೆ |
| | **ಬೈಂದೂರು ತಾಲ್ಲೂಕು** | | | | | | | |
| 13 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಅಭಿವೃದ್ಧಿ ಕಾಮಗಾರಿಗಳನು. ಕೈಗೊಳ್ಳುವ ಬಗ್ಗೆ | 2021-22 ಪ್ರಧಾನ ಕಾಮಗಾರಿಗಳು | 1138.84 | ಕೆ.ಟಿ.ಐ.ಎಲ್. | 526.99 | 300.00 | 311.85 | ಕಾಮಗಾರಿ ಅಂತಿಮ ಹಂತದಲ್ಲಿದೆ |
| 14 | ಉಡುಪಿ ಜಿಲ್ಲೆ, ಬೈಂದೂರು ತಾಲ್ಲೂಕಿನ ಪಡುವರಿ ಸೋಮೇಶ್ವರದ ಶ್ರೀ ಸೋಮನಾಥೇಶ್ವರ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿ | 2023-24 ಪ್ರಧಾನ ಕಾಮಗಾರಿಗಳು | 124.00 | ಕೆ.ಟಿ. ಐ.ಎಲ್. | 0.00 | 41.00 | 83.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿ: 15.04.2024 ರಲ್ಲಿನ ಸೂಚನೆಯನ್ವಯ ಸರ್ಕಾರದ ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ |
| | **ಪುತ್ತೂರು ತಾಲ್ಲೂಕು** | | | | | | | |
| 15 | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪ್ರವಾಸೋದ್ಯಮ ಕೇಂದ್ರವಾದ ಬಿರುಮಲೆ ಬೆಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿಯ ಕುರಿತು | 2024-25 ಬಂಡವಾಳ ವೆಚ್ಚಗಳು | 200.00 | ಜಿಲ್ಲಾಧಿಕಾರಿಗಳು | 0.00 | 100.00 | 100.00 | ಪ್ರಗತಿ ಯಲ್ಲಿದೆ |
| | **ಉತ್ತರ ಕನ್ನಡ ಜಿಲ್ಲೆ** | | | | | | | |
| | **ಹೊನ್ನಾವರ ತಾಲ್ಲೂಕು** | | | | | | | |
| 16 | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಇಡಗುಂಜಿ ಗ್ರಾಮ ಪಂಚಾಯತ್ ಶ್ರೀ ಕ್ಷೇತ್ರಪಾಲೇಶ್ವರ ದೇವಸ್ಥಾನ ಮಾಳ್ಕೋಡು ಸಮೀಪ ಯಾತ್ರಿನಿವಾಸ ನಿರ್ಮಾಣ | 2017-18 ಬಂಡವಾಳ ವೆಚ್ಚಗಳು | 25.00 | ಕೆಆರ್‌ಐಡಿಎಲ್ | 10.00 | 13.75 | 1.25 | ಪೂರ್ಣ ಗೊಂಡಿದೆ |
| | **ಶಿರಸಿ ತಾಲ್ಲೂಕು** | | | | | | | |
| 17 | ಶಿರಸಿ ನಗರದ ದೇವಿಕೆರೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ. | 2015-16 ಬಂಡವಾಳ ವೆಚ್ಚಗಳು | 250.00 | ಕೆಆರ್‌ಐಡಿಎಲ್ | 225.00 | 25.00 | 0.00 | ಪೂರ್ಣ ಗೊಂಡಿದೆ |
| 18 | ಶಿರಸಿ ತಾಲ್ಲೂಕಿನ ಸೋಂದಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಶ್ರೀ ಕ್ಷೇತ್ರ ಸ್ವಾತಿ ದಿಗಂಬರ ಜೈನ ಮಠ ಇಲ್ಲಿ ಯಾತ್ರಿನಿವಾಸ ನಿರ್ಮಾಣ | 2019-20 ಬಂಡವಾಳ ವೆಚ್ಚಗಳು | 164.25 | ನಿರ್ಮಿತಿ ಕೇಂದ್ರ | 100.00 | 20.00 | 44.25 | ಪ್ರಗತಿ ಯಲ್ಲಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್-2023ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | 2023-24 ರಿಂದ ಈವರಗೂ ಬಿಡುಗಡೆ ಮಾಡರುವ ಅನುದಾನ | ಬಾಕಿ | ಭೌತಿಕ ಹಂತ |
|---|---|---|---|---|---|---|---|---|
| | **ಕುಮಟಾ ತಾಲ್ಲೂಕು** | | | | | | | |
| 19 | ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕಿನ ಯಾಣ ಶ್ರೀ ಭೈರವೇಶ್ವರ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಹಾಗೂ ಪಕ್ಕ ಚರಂಡಿ ಮತ್ತು ಇನ್ನಿತರೆ ಅಗತ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ | 2023-24 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 0.00 | 100.00 | 0.00 | ಮಳೆಗಾಲ ಮುಗಿದ ನಂತರ ಪ್ರಾರಂಭಿಸಲಾಗುವುದು. |
| | **ಯಲ್ಲಾಪುರ ತಾಲ್ಲೂಕು** | | | | | | | |
| 20 | ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ದೇಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಿಗೆ ಗ್ರಾಮದ ಶಿವಪುರ ತೂಗುಸೇತುವೆ ಹಾಗೂ ಕಾಳಿ ನದಿ ಹಿನ್ನೀರಿನ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಿ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ | 2023-24 ಬಂಡವಾಳ ವೆಚ್ಚಗಳು | 100.00 | ಕೆ.ಆರ್.ಐ.ಡಿ.ಎಲ್ | 0.00 | 100.00 | 0.00 | ಮಳೆಗಾಲ ಮುಗಿದ ನಂತರ ಪ್ರಾರಂಭಿಸಲಾಗುವುದು. |
| | **ದಾಂಡೇಲಿ ತಾಲ್ಲೂಕು** | | | | | | | |
| 21 | ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ಮೊಸಳೆ ಉದ್ಯಾನವನ ಅಭಿವೃದ್ಧಿ (ಲ್ಯಾಂಡ್ ಸ್ಕೇಪಿಂಗ್, ಪಾರ್ಕಿಂಗ್, ಪಾತ್ ವೇ, ಚೈನ್ ಲಿಂಕ್ ಫೆನ್ಸಿಂಗ್, ವಿವ್ಹಿಂಗ್ ಡೆಕ್, ಸ್ವಾಗತ ಕಮಾನು, ಕಾಫೀ ಶಾಪ್, ಶೌಚಾಲಯ, ಪರಗೋಲ, ಸಾಲಿಡ್ ವೇಸ್ಟ್ ನಿರ್ವಹಣಾ ಘಟಕ, ಸೂಚನಾ ಫಲಕಗಳು, ಲೈಟಿಂಗ್ ಸೌಲಭ್ಯ, ಇತ್ಯಾದಿ) | 2019-20 ಪ್ರಧಾನ ಕಾಮಗಾರಿಗಳು | 372.60 | ಲೋಕೋಪಯೋಗಿ ಇಲಾಖೆ | 325.00 | 47.60 | 0.00 | ಪೂರ್ಣಗೊಂಡಿದೆ |
| | **ಒಟ್ಟು ಮೊತ್ತ** | | **4854.71** | | **2323.49** | **1324.85** | **1206.37** | |